# ಹುಣಸೂರು ಪರಿಸರದ ಜೈನ ಬಸದಿಗಳ ಚಾರಿತ್ರಿಕ ಹಿನ್ನಲೆ

ಸುಧಾ
ಇತಿಹಾಸ ಉಪನ್ಯಾಸಕಿ, ಎಸ್.ಜಿ.ಎಂ.ಕೆ.ಪಿ.ಯು ಕಾಲೇಜ, ಬಾದಾಮಿ.

DOI: https://doi.org/10.5281/zenodo.17296764

## ABSTRACT:

ಕರ್ನಾಟಕದಲ್ಲಿ ತೇಗದ ನಾಡೆಂದೇ ಹೆಸರಾಗಿರುವ ಹುಣಸೂರು ಪ್ರದೇಶವು ಸಾಂಸ್ಕೃತಿಕ ನಗರಿ ಮೈಸೂರು ಜಿಲ್ಲೆಯ ವ್ಯಾಪ್ತಿಗೆ ಸೇರಿದ್ದು, ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಇದು ಒಂದಾಗಿದೆ. ಲಕ್ಷ್ಮಣ ತೀರ್ಥ ನದಿಯ ಎರಡು ಇಕ್ಕೆಲುಗಳಲ್ಲಿ ಬೆಳೆದು ನಿಂತಿರುವ ಈ ಪ್ರದೇಶ ಮೈಸೂರಿನಿಂದ ಮಂಗಳೂರಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿಯ ಮಧ್ಯದಲ್ಲಿ, ಅಂದರೆ ಜಿಲ್ಲಾ ಕೇಂದ್ರದಿಂದ 47 ಕಿ.ಮಿ. ದೂರದಲ್ಲಿದ್ದು, ಇದು ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಮಲೆನಾಡಿನ ಸೆರಗಿನಲ್ಲಿ ಕೊಡಗು ಜಿಲ್ಲೆಗೆ ಹೊಂದಿಕೊಂಡಂತಿದೆ. ಅಲ್ಲದೆ ಇದು ಗಿರಿ ಪ್ರದೇಶಗಳಿಂದ ಕೂಡಿರುವ ವೈಶಿಷ್ಟ್ಯಪೂರ್ಣ ಅರೆಮಲೆನಾಡಾಗಿದ್ದು, ಸುತ್ತಲ ಜಿಲ್ಲೆ ಮತ್ತು ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ಆಯಕಟ್ಟಿನ ಸ್ಥಳದಲ್ಲಿದ್ದು, ಪ್ರಗತಿ ಪಥದಲ್ಲಿ ಇದು ಮುನ್ನಡೆಯುತ್ತಿದೆ. ಈ ಪ್ರದೇಶವನ್ನು ಟಿಪ್ಪು ಸುಲ್ತಾನನು ತನ್ನ ಸೈನಿಕ ನೆಲೆಯಾಗಿ ಉಪಯೋಗಿಸುತ್ತಿದ್ದನು ಮತ್ತು 1882ರಲ್ಲಿ ಇದು ತಾಲ್ಲೂಕು ಆಗಿ ಏಳಿಗೆಗೆ ಬಂದಿತು. ಈ ಪ್ರದೇಶದಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಯ ಹರಿಕಾರರೂ, ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳೂ ಆದ ದಿವಂಗತ ಡಿ. ದೇವರಾಜ ಅರಸು ಹಾಗೂ ಕನ್ನಡ ಸಿನಿಮಾ ರಂಗಕ್ಕೆ ಅಪಾರ ಕೊಡುಗೆ ನೀಡಿ ಕನ್ನಡ ಚಲನಚಿತ್ರ ಕ್ಷೇತ್ರದಲ್ಲಿ ಹುಣಸೂರು ಎಂದೇ ಪ್ರಸಿದ್ಧಿಗಳಿಸಿ, ನಾಯಕ ನಟರಾಗಿ, ನಿರ್ದೇಶಕ, ನಿರ್ಮಾಪಕ, ಸಂಭಾಷಣಾಕಾರ, ಗೀತರಚನಾಕಾರರಾಗಿ ಬಹುಮುಖ ಪ್ರತಿಭೆ ತೋರಿದ ಹುಣಸೂರು ಕೃಷ್ಣಮೂರ್ತಿ ಇಂತಹ ಮಹನೀಯರಿಗೆ ಜನ್ಮ ನೀಡಿದ ಸ್ಥಳವೇ ಹುಣಸೂರು.

## KEYWORDS:

ಬಸದಿಗಳು, ಯಕ್ಷರು, ಪ್ರಾಂಗಣದಲ್ಲಿ, ಪಾರ್ಶ್ವನಾಥ, ಅಂಕಣ.

### ಪೀಠಿಕೆ

ಜೈನರು ಮಗಧದಲ್ಲಿ ಉಂಟಾದ ಮಹಾಕ್ಷಾಮದ ಪರಿಣಾಮವಾಗಿ ದಕ್ಷಿಣದಲ್ಲಿ ಆಶ್ರಯ ಪಡೆಯಲು ಭದ್ರಬಾಹು, ತನ್ನ ರಾಜ ಶಿಷ್ಯ ಚಂದ್ರಗುಪ್ತ ಮೌರ್ಯ ಮತ್ತಿತರ ಅಪಾರ ಶಿಷ್ಯವರ್ಗದೊಂದಿಗೆ ವಲಸೆ ಹೊರಟು ಬಂದರು. ಇದರ ಫಲವಾಗಿ ದಿಗಂಬರ ಸಮುದಾಯವು ಮೈಸೂರು ಪ್ರದೇಶದಲ್ಲಿ ಬೇರೂರಿ ಶ್ರವಣಬೆಳಗೊಳವನ್ನು ಕೇಂದ್ರವನ್ನಾಗಿ ಹೊಂದಿತ್ತು. ವಿಸ್ತಾರ ಮತ್ತು ವೈವಿಧ್ಯಮಯವಾದ ಭಾರತೀಯ ವಾಸ್ತುಶಿಲ್ಪಗಳಲ್ಲಿ ಜೈನರ ವಾಸ್ತುಶಿಲ್ಪಗಳು ಹಾಸುಹೊಕ್ಕಾಗಿ ಬೆರೆತು ಅದರ ಏಳು-ಬೀಳುಗಳಲ್ಲಿ ಪಾಲ್ಗೊಂಡು, ವ್ಯಾಪಕವಾಗಿ ಬಂದು ಭಾರತೀಯ ಕಲಾ ವೈಭವಕ್ಕೆ ಮಹತ್ತರವಾದ ಕಾಣಿಕೆಯನ್ನು ನೀಡಿವೆ. ಕರ್ನಾಟಕಕ್ಕೆ ಕ್ರಿ.ಪೂ.ದಲ್ಲಿಯೇ ಜೈನರು ವಲಸೆ ಬಂದರೆಂದು ಪ್ರತೀತಿ ಇದ್ದರೂ, ಇವರ ವಾಸ್ತುಶಿಲ್ಪಗಳು ದೊರೆಯುವುದು ಕ್ರಿ.ಶ. 6-7ನೆಯ ಶತಮಾನದಿಂದೀಚೆಗೆ. ಕರ್ನಾಟಕದಲ್ಲಿ ಅನೇಕ ರಾಜಮನೆತನಗಳು ಕೊಟ್ಟ ಪ್ರೋತ್ಸಾಹದಿಂದ ಜೈನ ವಾಸ್ತುಶಿಲ್ಪ ವಿಸ್ತಾರವಾಗಿಯೂ ವೈವಿಧ್ಯಮಯವಾಗಿಯೂ ಬೆಳೆಯಲು ಅವಕಾಶವಾಯಿತು. ಹುಣಸೂರು ಪ್ರದೇಶದಲ್ಲಿ ಜೈನ ವಾಸ್ತುಶಿಲ್ಪ ವಿಪುಲವಾಗಿತ್ತು. ಹೊಯ್ಸಳರ ಕಾಲದಲ್ಲಿಯೂ ಸಹ, ಹೊಯ್ಸಳರ ಕಾಲದಲ್ಲಿ ಕರ್ನಾಟಕದ ಅನೇಕ ಜಿಲ್ಲೆ, ತಾಲ್ಲೂಕುಗಳಲ್ಲಿ ಬಸದಿಗಳು ನಿರ್ಮಾಣಗೊಂಡಿವೆ. ಚಂಗಾಳ್ವರ

ಕಾಲದಲ್ಲೂ ಅದು ಅತ್ಯಂತ ನವಿರಾದ ಅಲಂಕರಣಗಳಿಂದ ಕೂಡಿದೆ. ಅದರಲ್ಲಿ ಯಮಗುಂಭ ಜೈನ ಬಸದಿಯು ಒಂದು.

ಈ ಪ್ರದೇಶದಲ್ಲಿ ಹಲವು ಬಸದಿಗಳು ಪ್ರಾಕೃತಿಕ ಮತ್ತು ಇತರ ಕಾರಣಗಳಿಂದ ಉಳಿದಿರುವುದಕ್ಕಿಂತ ನಾಶವಾಗಿರುವುದೇ ಹೆಚ್ಚು. ಆದರೂ ನಾನಾ ಕಡೆ ವ್ಯಾಪಕವಾಗಿ ಹರಡಿರುವ ಶಿಲ್ಪಗಳು, ಇತರೆ ವಾಸ್ತು ಭಾಗಗಳು ಹಾಗೂ ಈಗ ಉಳಿದಿರುವ ಬಸದಿಗಳು, ವಿಸ್ತಾರವಾದ ಜೈನ ವಾಸ್ತುಶಿಲ್ಪ ರೀತಿಯ ಭವ್ಯ ಚಿತ್ರವನ್ನು ಕಣ್ಣೆದುರಿಗೆ ತಂದು ನಿಲ್ಲಿಸುತ್ತದೆ. ಹೀಗೆ ಈ ಜೈನಧರ್ಮ ಈ ಸುಂದರ ಪರಿಸರವಾದ ಹುಣಸೂರಿನಲ್ಲಿ ಏಳಿಗೆಗೆ ಬಂದು ಇದರ ಪ್ರಭಾವದಿಂದ ಇಲ್ಲಿ ಅನೇಕ ಜೈನ ಬಸದಿಗಳು ನಿರ್ಮಾಣವಾದವು. ಅವುಗಳಲ್ಲಿ ಕೆಲವು ನಾಶ ಹೊಂದಿವೆ, ಕೆಲವು ಅವನತಿಯ ಅಂಚಿನಲ್ಲಿವೆ. ಇನ್ನೂಳಿದ ಕೆಲವೇ ಕೆಲವುಗಳೆಂದರೆ ಯಮಗುಂಭದ ಪಾರ್ಶ್ವನಾಥನ ಬಸದಿ, ಕಲ್ಲಹಳ್ಳಿಯ ಜೈನಬಸದಿ, ಗೊಮ್ಮಟಗಿರಿಯ ಬಾಹುಬಲಿಯ ಮೂರ್ತಿ. ಜೈನ ಬಸದಿಗಳು ಎಂದರೆ ಜೈನ ದೇವಾಲಯಗಳು ಎಂದು ಅರ್ಥ.

**ಯಮಗುಂಭದ ಪಾರ್ಶ್ವನಾಥನ ಬಸದಿ**

ಹುಣಸೂರು ಪ್ರದೇಶವು ಚಂಗಾಳ್ವರ ಆಳ್ವಿಕೆಗೆ ಒಳಪಟ್ಟಿದ್ದು, ಇವರು ಮೂಲ ಜೈನ ಧರ್ಮೀಯರಾಗಿದ್ದು ತಮ್ಮ ಅಧಿಕಾರದ ಅವಧಿಯಲ್ಲಿ ಈ ಧರ್ಮದ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಿದ್ದರು. ಇವರ ಇತಿಹಾಸವನ್ನು ತಿಳಿದುಕೊಳ್ಳುವುದಕ್ಕೆ ಹುಣಸೂರಿನ ವ್ಯಾಪ್ತಿಗೆ ಒಳಪಟ್ಟಿರುವ ಯಮಗುಂಭ ಗ್ರಾಮದಲ್ಲಿ ಒಂದು ಐತಿಹಾಸಿಕ ಜೈನ ಬಸದಿಯೊಂದು ಕಂಡು ಬಂದಿದೆ. ಈ ಜೈನ ಬಸದಿಯು ಚೋಳರಾಜ ಎರಡನೇ ಮಂಗರಸನ ಕಾಲದ್ದೆಂದು, ಅಂದರೆ ಸುಮಾರು ಕ್ರಿ.ಶ. 11ನೇ ಶತಮಾನದ್ದೆಂದು ಇತಿಹಾಸ ತಿಳಿಸುತ್ತದೆ. ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಈ ಬಸದಿಯನ್ನು ಆ ಕಾಲದಲ್ಲಿ ತಾಲ್ಲೂಕಿನ ಕಲ್ಲಹಳ್ಳಿಯಲ್ಲಿ ಆಳುತ್ತಿದ್ದ ಎರಡನೇ ಮಂಗರಸ ಕಟ್ಟಿಸಿದ್ದಾನೆ. 160/63 ಚದರ ಅಡಿ ವಿಸ್ತೀರ್ಣದಲ್ಲಿರುವ ಈ ಬಸದಿಯು ಅತ್ಯಂತ ಸುಂದರವಾಗಿದೆ. ಮುಖ್ಯ ದ್ವಾರದ ಎರಡೂ ಬದಿಯಲ್ಲೂ ಯಕ್ಷರು (ದ್ವಾರಪಾಲಕರು) ಹಾಗೂ ದ್ವಾರದ ಮೇಲ್ಭಾಗದಲ್ಲಿ 23ನೇ ಪಾರ್ಶ್ವನಾಥ ತೀರ್ಥಂಕರರ ಮೂರ್ತಿಯ ಕೆತ್ತನೆಯಿದೆ. ಬಸದಿಯನ್ನು ಒಳ ಪ್ರವೇಶಿಸಿದರೆ ಪ್ರಾಂಗಣದ ಎರಡೂ ಬದಿಯಲ್ಲಿ ಒಟ್ಟು ಎಂಟು ಸುಂದರವಾದ ಕೆತ್ತನೆಯುಳ್ಳ ಕಂಬಗಳಿವೆ. ಪ್ರಾಂಗಣದ ಮೇಲ್ಛಾವಣಿಯ ಒಳಭಾಗದಲ್ಲಿ ಚತುಷ್ಪಾಕೃತಿಯ ಸುಂದರ ಕೆತ್ತನೆಯಿದೆ. ಗರ್ಭಗುಡಿಯಲ್ಲಿ 5 ಅಡಿ ಎತ್ತರದ ಜೈನ ತೀರ್ಥಂಕರ ಪಾರ್ಶ್ವನಾಥರು ನಿಂತಿರುವ ಸುಂದರ ಮೂರ್ತಿಯಿದೆ. ಜೊತೆಯಲ್ಲಿ ಪಾರ್ಶ್ವನಾಥ ತೀರ್ಥಂಕರರ ಲಾಂಛನವಾಗಿದ್ದ ಹಾವು ಕೂಡ ಕೆತ್ತಲ್ಪಟ್ಟಿದೆ. ಇದು ಸುಂದರ ಪ್ರಭಾವಳಿಯನ್ನು ಹೊಂದಿದೆ. ಪಾರ್ಶ್ವನಾಥರ ವಿಗ್ರಹ ಪೂರ್ವಭಿಮುಖವಾಗಿದ್ದರೆ, ದಕ್ಷಿಣಾಭಿಮುಖವಾಗಿ ಬ್ರಹ್ಮ ಯಕ್ಷರ ವಿಗ್ರಹಗಳಿವೆ. ಎಲ್ಲಾ ಜೈನ ಬಸದಿಗಳಲ್ಲೂ ಯಕ್ಷ-ಯಕ್ಷಿಣಿಯರ ವಿಗ್ರಹಗಳಿರುವುದು ಸಾಮಾನ್ಯ. ಭಕ್ತರು ತೀರ್ಥಂಕರರಿಗೆ ಅಭಿಷೇಕ ಸಲ್ಲಿಸಿ ಯಕ್ಷ-ಯಕ್ಷಿಯರಲ್ಲಿ ತಮ್ಮ ಹರಕೆ, ಪೂಜೆ ಸಲ್ಲಿಸುವುದು ವಾಡಿಕೆಯಲ್ಲಿದೆ. ಬಸದಿಯ ದಕ್ಷಿಣ ಭಾಗದ ಗೋಡೆಯಲ್ಲಿ ಇನ್ನೊಂದು ಸಣ್ಣದಾದ ಬಾಗಿಲು ಇದೆ.

**ಬಸದಿಯ ಜೀರ್ಣೋದ್ಧಾರ 1975ರಲ್ಲಿ ಜೀರ್ಣೋದ್ಧಾರಗೊಂಡಿತ್ತು:**

ದಕ್ಷಿಣ ಭಾರತ ಕಂಡ ದಕ್ಷ ರಾಜಕಾರಣಿಯಾದ, ಕರ್ನಾಟಕದ ಧೀಮಂತ ನಾಯಕರಾದ ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸರ ಹುಟ್ಟೂರು

ಕಲ್ಲಹಳ್ಳಿ. ಈ ಕಲ್ಲಹಳ್ಳಿಯಲ್ಲಿ ಎರಡನೇ ಮಂಗರಸ ತನ್ನ ಆಳ್ವಿಕೆ ನಡೆಸಿದ್ದ ಕಾರಣ ಅರಸರ ಮನೆತನಕ್ಕೆ ಜೈನ ಸಂಪ್ರದಾಯದ ಪ್ರಭಾವವಿತ್ತು. ಈ ನಿಟ್ಟಿನಲ್ಲಿ ಅರಸರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ 1975ರಲ್ಲಿ ಬಸದಿಯ ಜೀರ್ಣೋದ್ಧಾರಕ್ಕೆ ನಿರ್ಧರಿಸಿ ಪುರಾತತ್ವ ಇಲಾಖೆಗೆ ಜೀರ್ಣೋದ್ಧಾರಗೊಳಿಸಲು ಆದೇಶಿಸಿದ್ದಾರೆ. ಬಸದಿಯ ಮೇಲ್ಛಾವಣಿ ಸಂಪೂರ್ಣವಾಗಿ ಶಿಥಿಲ ಸ್ಥಿತಿಯಲ್ಲಿದ್ದುದನ್ನು ಮನಗಂಡು ಪುರಾತತ್ವ ಇಲಾಖೆ ಮೇಲ್ಛಾವಣಿಯನ್ನು ಹಾಗೂ ಬಸದಿಯನ್ನು ಅದರ ಐತಿಹ್ಯಕ್ಕೆ ಕುಂದು ಬಾರದಂತೆ ಜೀರ್ಣೋದ್ಧಾರಗೊಳಿಸಿತು. ನಂತರದಲ್ಲಿ ಪುರಾತತ್ವ ಇಲಾಖೆ ಇತ್ತ ಕಡೆ ಗಮನ ಹರಿಸಿಲ್ಲ. ಈಗ ಮೇಲ್ಛಾವಣಿ ಅಲ್ಲಲ್ಲಿ ಸೋರುತ್ತಿದೆ.

**ಸೂರ್ಯ ರಶ್ಮಿಯ ಸಿಂಚನ ವಿಗ್ರಹದ ಮೇಲೆ:**

ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳಿನಲ್ಲಿ ಎರಡು-ಮೂರು ದಿನ ಸೂರ್ಯೋದಯದ ನಂತರ ಸೂರ್ಯ ರಶ್ಮಿ ನೇರವಾಗಿ ಮುಖ್ಯದ್ವಾರದಿಂದ ತೀರ್ಥಂಕರರ ವಿಗ್ರಹದ ಮೇಲೆ ಬೀಳುತ್ತದೆ. ಮೊದಲ ದಿನ ಇಡೀ ವಿಗ್ರಹಕ್ಕೆ ಸೂರ್ಯ ಕಿರಣದ ಸಿಂಚನವಾಗುತ್ತದೆ. ಕ್ರಮೇಣ ಕಡಿಮೆಯಾಗುತ್ತದೆ ಎನ್ನುತ್ತಾರೆ ಬಸದಿಯ ಅರ್ಚಕ ದೇವಕೀರ್ತಿ ಎನ್. ರವರು.

**ಸಂಶೋಧಕರಿಗೆ ಸಮೃದ್ಧ ವಸ್ತು:**

ಬಸದಿಯ ಪ್ರಾಂಗಣದಲ್ಲಿ ಜೀರ್ಣೋದ್ಧಾರಕ್ಕೂ ಮುನ್ನ ಜೈನ 24 ತೀರ್ಥಂಕರರ ವಿಗ್ರಹಗಳನ್ನು ನೆಲದಲ್ಲಿ ಇರಿಸಲಾಗಿತ್ತೆಂದು ತಿಳಿದು ಬರುತ್ತದೆ. ಆದರೆ ಜೀರ್ಣೋದ್ಧಾರದ ಸಮಯದಲ್ಲಿ ಪುರಾತತ್ವ ಇಲಾಖೆಯವರು ಹೆಚ್ಚಿನ ಸಂಶೋಧನೆಗಾಗಿ ಕೊಂಡೊಯ್ದಿದ್ದಾರೆಂದು ಅರ್ಚಕರು ತಿಳಿಸುತ್ತಾರೆ. ಯಾರ ಕಣ್ಣಿಗೂ ಬೀಳದ ಈ ಬಸದಿಯನ್ನು ಸಂಶೋಧಕರು ಒಮ್ಮೆ ಪ್ರವೇಶಿಸಿದರೆ ಮಂಗರಸರ ಆಳ್ವಿಕೆಯ ಇತಿಹಾಸಕ್ಕೆ ಇನ್ನಷ್ಟು ಮಾಹಿತಿ ಸಿಗುವುದಂತೂ ನಿಶ್ಚಿತ.

**ಎಮ್ಮೆಗುಂಭ ಆಯಿತು ಯಮಗುಂಭ:**

ಪದಕ್ಯಾತನಹಳ್ಳಿ ಗ್ರಾಮದಲ್ಲಿ ಚಂಗಾಳ್ವರ ಕಾಲದಲ್ಲಿ ರೈತರು ಎಮ್ಮೆಗಳನ್ನು ಸಾಕುತ್ತಿದ್ದರು. ಆ ಗ್ರಾಮದ ರೈತನೊಬ್ಬನ ಒಂದು ಎಮ್ಮೆ ಪ್ರತಿದಿನ ಹಾಲು ನೀಡುತ್ತಿರಲಿಲ್ಲ. ಕಾರಣವೇನೆಂದು ತಿಳಿಯಲು ರೈತ ಎಮ್ಮೆಯನ್ನು ಹಿಂಬಾಲಿಸಿದಾಗ ಎಮ್ಮೆಯು ಹುತ್ತವೊಂದಕ್ಕೆ ಹಾಲನ್ನು ಸುರಿಸುತ್ತಿತ್ತು. ಎಮ್ಮೆಯೊಂದು ಗುಂಭಕ್ಕೆ ಅಂದರೆ ಹುತ್ತಕ್ಕೆ ಹಾಲು ಸುರಿಸುತ್ತಿದ್ದುದು ಪ್ರಸಿದ್ಧವಾಗಿ ಎಮ್ಮೆಗುಂಭವೆಂದು ನಾಮಕರಣವಾಯಿತು. ಕಾಲಾನಂತರದಲ್ಲಿ ಎಮ್ಮೆಗುಂಭ ಯಮಗುಂಭವಾಯಿತು. ಈ ವಿಷಯವನ್ನು ರೈತ ಕಲ್ಲಹಳ್ಳಿಯ ಎರಡನೇ ಮಂಗರಸನಿಗೆ ತಿಳಿಸಿದಾಗ ಮಂಗರಸನ ಕನಸಿನಲ್ಲಿ ಆ ಜಾಗದಲ್ಲಿ ದೇವಾಲಯ ನಿರ್ಮಿಸಬೇಕೆಂಬ ಆರಾಧ್ಯ ದೈವದ ಆಜ್ಞೆಯಾಗುತ್ತದೆಯೆನ್ನುತ್ತದೆ ಸ್ಥಳಪುರಾಣ.

**ಕಲ್ಲಹಳ್ಳಿ ಜೈನ ಬಸದಿ**

ಕಲ್ಲಹಳ್ಳಿಯನ್ನು ಇವತ್ತಿನ ದಿನಗಳಲ್ಲಿ ಅರಸು ಕಲ್ಲಹಳ್ಳಿ ಎಂದು ಜನರು ಕರೆಯುತ್ತಾರೆ. ಕಾರಣ ಎಂದರೆ ಕರ್ನಾಟಕದ ಧೀಮಂತ ನಾಯಕರಾದ ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಅವರ ಹುಟ್ಟೂರು ಕಲ್ಲಹಳ್ಳಿ. ಆದ್ದರಿಂದ ಈ ಊರನ್ನು ಜನ ಅರಸು ಕಲ್ಲಹಳ್ಳಿ ಎಂದು ಕರೆಯುವ ವಾಡಿಕೆ ಇದೆ. ಇಲ್ಲಿ ಆಳ್ವಿಕೆ ಮಾಡಿದ ಚಂಗಾಳ್ವರ ರಾಜ ಮಂಗರಸ 16ನೇ ಶತಮಾನದಲ್ಲಿ ಹುಣಸೂರಿನಿಂದ 8 ಕಿಲೋಮೀಟರ್ ದೂರದಲ್ಲಿರುವ ಕಲ್ಲಹಳ್ಳಿಯಲ್ಲಿ ಆದಿನಾಥ ತೀರ್ಥಂಕರ ಜೈನ ಬಸದಿಯನ್ನು ನಿರ್ಮಿಸಿದನು.

ಕಲ್ಲಹಳ್ಳಿಯ ಜೈನಬಸದಿ ಹುಣಸೂರು ತಾಲ್ಲೂಕಿನಿಂದ ಪಿರಿಯಾಪಟ್ಟಣಕ್ಕೆ

ಹೋಗುವ ಮಾರ್ಗ ಮಧ್ಯದಲ್ಲಿ ಎಡಗಡೆ ಭಾಗದಲ್ಲಿರುವ ಗ್ರಾಮ. ಗ್ರಾಮವು ಹೆದ್ದಾರಿಯಿಂದ 1 ಕಿಲೋಮೀಟರ್ ದೂರವಿರುತ್ತದೆ. ಗ್ರಾಮದ ಮಧ್ಯಭಾಗದಲ್ಲಿ ಮಾಜಿ ಮುಖ್ಯಮಂತ್ರಿ ಡಿ. ದೇವರಾಜು ಅರಸು ಅವರ ಮನೆಯಿರುವ ಸ್ಥಳದ ಹಿಂಭಾಗದಲ್ಲಿ ಜೈನಬಸದಿ ಇದೆ.

**ವಾಸ್ತುಶಿಲ್ಪ :**

ಈ ಜೈನಬಸದಿಯ ಸ್ಥಾಪಕರು ಚಂಗಾಳ್ವ ಅರಸ 1ನೇ ಮಂಗರಸನ ಕಾಲದಲ್ಲಿ ನಿರ್ಮಿಸಲಾಗಿದೆ. ಈ ಜೈನ ಬಸದಿಯು ಗರ್ಭಗುಡಿ ಹಾಗೂ ಅದರ ಮುಂದೆ 4 ಕಂಬಗಳುಳ್ಳ ಮುಖಮಂಟಪವನ್ನು ಒಳಗೊಂಡಿದೆ. ಇದು 9 ಅಂಕಣದಿಂದ ಕೂಡಿದೆ. ಅಧಿಷ್ಠಾನವು ಕೂಡ 2.5 ಅಡಿ ಎತ್ತರವಿದೆ. ಹಾಗೂ ಒಂದು ಅಂಕಣದ ಗರ್ಭಗುಡಿಯು ಸಹ ಇದೆ. ಶ್ರೀಕರ ಕಂಬಗಳು ಮತ್ತು ಬೋದಿಗೆಗಳು ಕಂಡು ಬರುತ್ತದೆ. ಗರ್ಭಗುಡಿಯಲ್ಲಿ 5 ಅಡಿ ಎತ್ತರದ ಆದಿನಾಥ ತೀರ್ಥಂಕರರ ಒಂದು ವಿಗ್ರಹವಿದೆ. ಆದಿನಾಥ ತೀರ್ಥಂಕರನ ಸುತ್ತಲು ಕಪ್ಪು ಶಿಲೆಯಿಂದ ಕೂಡಿದೆ ಹಾಗೂ ಪಾದದ ಬಳಿ ಎರಡು ಶಿಲ್ಪಗಳನ್ನು ಸಹ ಕಾಣಬಹುದು. ಜಿನನ ಪಾದ ಪೀಠದಲ್ಲಿ ನಾಲ್ಕು ಸಾಲುಗಳುಳ್ಳ ಶಾಸನವನ್ನು ಬರೆಯಲಾಗಿದೆ.

ಹುಣಸೂರು ಪ್ರದೇಶದ ಕಲ್ಲಹಳ್ಳಿ, ಯಮಗುಂಭ, ರತ್ನಪುರಿ, ಹರವೆ, ರಾಮಪಟ್ಟಣ ಮುಂತಾದವು ಜೈನಧರ್ಮದ ಕೇಂದ್ರ ಸ್ಥಳಗಳಾಗಿದ್ದವು ಎಂಬುದಕ್ಕೆ ಇಲ್ಲೆಲ್ಲಾ ಶಿಥಿಲಾವಸ್ಥೆಯಲ್ಲಿರುವ ಜೈನಬಸದಿಗಳೇ ಜ್ವಲಂತ ಸಾಕ್ಷಿಗಳಾಗಿವೆ. ಅಂತೆಯೇ ಅರಸರ ಹುಟ್ಟೂರು ಕಲ್ಲಹಳ್ಳಿಯಲ್ಲಿ ಕೂಡ ಅರಸನಾಗಿದ್ದ ಮೂರನೇ ಮಂಗರಸ ಆಳಿದ ಕಾಲವಾದ ಕ್ರಿ.ಶ. 1508ರ ಸಮಯದಲ್ಲಿ ನಿರ್ಮಿಸಲಾಗಿರುವ ಜೈನ ಬಸದಿ ಇಂದಿಗೂ ತನ್ನದೇ ಆದ ಭವ್ಯತೆಯನ್ನು ಮೆರೆಯುತ್ತಿದೆ. ಬಸದಿಯನ್ನು ಈಗ ಜೀರ್ಣೋದ್ಧಾರಗೊಳಿಸಲಾಗಿದೆ. ಆದರೆ ಆ ಕಾಲದಲ್ಲಿ ಬಸದಿಯಲ್ಲಿ ಪ್ರತಿಷ್ಠಾಪಿಸಲಾದ 8ನೇ ತೀರ್ಥಂಕರ ಶ್ರೀ ಚಂದ್ರನಾಥಸ್ವಾಮಿಯ ಸುಂದರ ಮೂರ್ತಿ ನೋಡುಗರ ಗಮನ ಸೆಳೆಯುತ್ತದೆ.

**ಇಂದಿನ ಕಲ್ಲಹಳ್ಳಿ ಹಿಂದಿನ ಧಾತುಪುರ:**

ಮಂಗರಸರ ಆಳ್ವಿಕೆ ಕಾಲದಲ್ಲಿ ಕಲ್ಲಹಳ್ಳಿಗೆ ಧಾತುಪುರವೆಂದು ಹೆಸರಿತ್ತು ಎಂದು ಹಲವಾರು ಶಾಸನಗಳಿಂದ ತಿಳಿದು ಬರುತ್ತದೆ. ಧಾತು ಎಂದರೆ ಕಲ್ಲು, ಶಿಲೆ ಎಂದರ್ಥ. ದಿನಗಳೆದಂತೆ ಜನರ ಬಾಯಲ್ಲಿ ಧಾತುಪುರ ಕಲ್ಲಹಳ್ಳಿಯಾಗಿದೆ ಎನ್ನುವುದು ಇತಿಹಾಸಕಾರರ ಅಭಿಮತವಾಗಿದೆ.

**ನೋಡಲು ಅತಿಸುಂದರ ಮೂರ್ತಿ:**

ಸುಮಾರು 4 ಅಡಿ ಎತ್ತರದ ನಿಲುವಿನ ಭಂಗಿಯಲ್ಲಿರುವ ಜೈನರ ತೀರ್ಥಂಕರ ಶ್ರೀ ಆದಿನಾಥ ಸ್ವಾಮಿಯ ಕಪ್ಪು ಶಿಲೆಯ ವಿಗ್ರಹ ಅತ್ಯದ್ಭುತವಾಗಿದೆ. ಇದು ಸುಂದರ ಪ್ರಭಾವಳಿಯನ್ನು ಹೊಂದಿದ್ದು, ಪಾದದ ಎರಡೂ ಇಕ್ಕೆಲಗಳಲ್ಲಿ ಜೈನರು ಪೂಜಿಸುವ ಯಕ್ಷ-ಯಕ್ಷಿಣಿಯರ ಕೆತ್ತನೆಯಿದೆ. ತೀರ್ಥಂಕರರ ಕೇಶವನ್ನು ಗುಂಗುರು ಗುಂಗುರಾಗಿ ಕೆತ್ತಲಾಗಿದೆ. ಪಾದದಡಿ ಶಾಸನವೊಂದನ್ನು ಕೆತ್ತಲಾಗಿದೆ. ತೀರ್ಥಂಕರನು ಸುಂದರ ಮೂರ್ತಿ, ಉಬ್ಬು ಶಿಲ್ಪ ಕೆತ್ತನೆ, ಎದೆಯನ್ನು ಉಬ್ಬಿಸಿ ನೇರವಾಗಿ ನಿಂತಿರುವ ಕಪ್ಪು ಶಿಲ್ಪದಿಂದ ತೀರ್ಥಂಕರನು ಕಂಗೊಳಿಸುತ್ತಿದ್ದಾನೆ.

ಸೋಪ ಶಾಸ್ತ್ರವೆಂಬ ಕನ್ನಡದ ಮೊಟ್ಟಮೊದಲು ಪಾಕಶಾಸ್ತ್ರ ಗ್ರಂಥವನ್ನು ಬರೆದ ಮೊದಲ ಕವಿ ಮೂರನೇ ಮಂಗರಸ. ಈತ ಕವಿಯೂ ಹೌದು, ಅತ್ಯುತ್ತಮ ಕಲಿಯೂ

ಹೌದು. ತನ್ನ ಆಳ್ವಿಕೆಯಲ್ಲಿ ದೊಡ್ಡಹುಣಸೂರು, ಹನಸೋಗೆ ಹಾಗೂ ಪಿರಿಯಾಪಟ್ಟಣ ಭಾಗದಲ್ಲಿ ಸಮರ್ಥ ಆಡಳಿತಗಾರನಾಗಿದ್ದ.

**ನೂತನ ಬಸದಿ:**

ಸರ್ಕಾರದ ಅನುದಾನದಿಂದ ಸಂಪೂರ್ಣ ಶಿಥಿಲಗೊಂಡಿದ್ದ ಬಸದಿಯನ್ನು ನವೀಕರಿಸಲಾಗಿದೆ. ಕಲ್ಲಹಳ್ಳಿಯ ಅರಸು ಮನೆತನದ ವಂಶಸ್ಥರು ಯಮಗುಂಭ ಹಾಗೂ ಚಿಕ್ಕಹನಸೋಗೆಯಲ್ಲಿ ಜೈನಬಸದಿಗಳನ್ನು ನಿರ್ಮಿಸಿದ್ದರು.

**ಗೊಮ್ಮಟಗಿರಿಯ ಬಾಹುಬಲಿ**

ಬಿಳಿಕೆರೆಯ ಬೆಟ್ಟದೂರು ಸಮೀಪ ಇರುವ ಗೊಮ್ಮಟಗಿರಿ ಹುಣಸೂರು ಪ್ರದೇಶದ ವ್ಯಾಪ್ತಿಗೆ ಒಳಪಟ್ಟಿದ್ದು, ಇದು ಮೈಸೂರಿನಿಂದ 25 ಕಿಲೋಮೀಟರ್ ದೂರದಲ್ಲಿದೆ. ಇಲ್ಲಿ 18 ಅಡಿ ಎತ್ತರದ ಗೊಮ್ಮಟೇಶ್ವರ ಮೂರ್ತಿಯನ್ನು ಚಂಗಾಳ್ವ ಅರಸರು ತಮ್ಮ ಅವಧಿಯಲ್ಲಿ ನಿರ್ಮಿಸಿ ಜೈನ ಧರ್ಮಕ್ಕೆ ಹೆಚ್ಚಿನ ಗಮನ ನೀಡಿದರು ಎಂದು ಹೇಳಬಹುದು.

ಹುಣಸೂರು ಪ್ರದೇಶದ ಬಿಳಿಕೆರೆ ಹೋಬಳಿಯ ಬೆಟ್ಟದೂರು ಸಮೀಪ ಇರುವ ಗೊಮ್ಮಟಗಿರಿ ಬಾಹುಬಲಿ ಕಂಡು ಬರುತ್ತದೆ. ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿರುವ 18 ಅಡಿ ಎತ್ತರದ ಗೊಮ್ಮಟೇಶ್ವರನ ಮೂರ್ತಿಯು ಇದೆ. ಈ ವೈರಾಗ್ಯ ಮೂರ್ತಿ 600 ವರ್ಷಗಳ ಇತಿಹಾಸ ಹೊಂದಿರುವ ಬಾಹುಬಲಿಯ ಸುಂದರ ಶಿಲಾ ರೂಪ. ಈ ಪ್ರದೇಶದ ಬಿಳಿಕೆರೆ ಹೋಬಳಿ ವ್ಯಾಪ್ತಿಯ ಬೆಟ್ಟದೂರು ಶ್ರವಣಗುಡ್ಡದಲ್ಲಿ ವಿರಾಜಮಾನನಾಗಿದ್ದಾನೆ.

ಬಾಹುಬಲಿಯ ಕುರಿತಾಗಿ ಯಾವುದೇ ಶಾಸನಗಳೂ ಸಿಕ್ಕಿಲ್ಲ. ಹಾಗಾಗಿ ಕೇವಲ ಅಂದಾಜಿನ ಪ್ರಕಾರ ಕಾಲಘಟ್ಟವನ್ನು ನಿರ್ಧರಿಸಲಾಗುತ್ತಿದೆ. ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಸಂದರ್ಭದಲ್ಲಿ ಈ ಭಾಗದಲ್ಲಿದ್ದ ಗಂಗರಸರು ಈ ಬಾಹುಬಲಿ ಮೂರ್ತಿಯನ್ನು ಸ್ಥಾಪಿಸಿರಬಹುದೆಂದು ಕೆಲವರು ತಿಳಿಸಿದರೆ, ಶ್ರವಣಬೆಳಗೊಳದ ಬಾಹುಬಲಿಯ ಮೂರ್ತಿಯಂತೆಯೇ ಈ ಮೂರ್ತಿಯೂ ಇರುವುದರಿಂದ, ಅಲ್ಲಿನ ಮೂರ್ತಿ ಕೆತ್ತಿದ ಚಾವುಂಡರಾಯನೇ ಇದನ್ನು ನಿರ್ಮಿಸಿದ್ದು, ಅದೇ ಕಾಲಘಟ್ಟದಲ್ಲಿ ಇದು ಸ್ಥಾಪಿತವಾಗಿರಬಹುದೆ ಎನ್ನಲಾಗಿದೆ. ಬಾಹುಬಲಿಯ ಕುರಿತಾಗಿ ಯಾವುದೇ ಶಾಸನಗಳೂ ಸಿಕ್ಕಿಲ್ಲ. ಗುಂಗುರು ಕೂದಲಿನಿಂದ ಕೂಡಿರುವ ಗೊಮ್ಮಟೇಶ್ವರನ ಪ್ರತಿಮೆ ಗಂಭೀರ ಮುಖಮುದ್ರೆಯಲ್ಲಿದೆ. ಆ ಪ್ರದೇಶದ ಸುತ್ತಮುತ್ತಲಲ್ಲಿ ಪುಷ್ಕರಿಣಿ, ತೀರ್ಥಂಕರರ ಪಾದ ಹಾಗೂ ಮಹಾವೀರರು ಮೋಕ್ಷ ಪಡೆದ ಐತಿಹಾಸಿಕ ಸ್ಮಾರಕವು ಇಲ್ಲಿದೆ ಎಂದು ಹೇಳುತ್ತಾರೆ.

200 ಅಡಿ ಎತ್ತರದ ಬಂಡೆಯಲ್ಲಿ 18 ಅಡಿ ಎತ್ತರವುಳ್ಳ ಏಕಶಿಲಾ ಬಾಹುಬಲಿಯ ದಿವ್ಯ ಮೂರ್ತಿ ಎಂತಹವರ ಮನಸನ್ನೂ ಆಕರ್ಷಿಸುತ್ತದೆ. 80-90 ಮೆಟ್ಟಿಲುಗಳನ್ನು ಹತ್ತಿ ಮೂರ್ತಿಯ ಬಳಿ ನಿಂತರೆ ಎಲ್ಲ ಆಯಾಸವನ್ನೂ ಪರಿಹರಿಸುವ ಸುಂದರ, ನಗ್ನ ಬಾಹುಬಲಿ ನಮ್ಮ ಮನಸೂರೆಗೊಳ್ಳುವುದರಲ್ಲಿ ಸಂಶಯವಿಲ್ಲ. ಜೈನ ತೀರ್ಥಂಕರರ ಸಂಪ್ರದಾಯಿಕ ಚಿಹ್ನೆಯಾದ ಹಾವು ಬಾಹುಬಲಿಯ ಪಾದತಳದಿಂದ ಮುಡಿಯವರೆಗೆ ಆವರಿಸಿದೆ. ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟಿರುವ ಮೂರ್ತಿಗೆ ಪ್ರತಿವರ್ಷ ಜೈನ ಸಮುದಾಯ ಮಸ್ತಕಾಭಿಷೇಕ ನಡೆಸುತ್ತಿದೆ.

**ತೀರ್ಥಂಕರರ ಬಸದಿಗಳು:**

ಬೆಟ್ಟದ ತಪ್ಪಲಿನಲ್ಲಿ 24 ಜೈನ ತೀರ್ಥಂಕರರ ಬಸದಿಗಳನ್ನು ಸುಂದರವಾಗಿ

ನಿರ್ಮಿಸಲಾಗಿದೆ. ಅಲ್ಲದೇ ಬಳಿಯಲ್ಲಿ ಜಲಮಂದಿರವೂ ಇದೆ. ಅಲ್ಲೇ ತೀರ್ಥಂಕರರ ಪಾದುಕಾ ಮಂದಿರವೂ ಇದೆ.

**ಆಕರ್ಷಕ ಪರಿಸರ:**

ಬಾಹುಬಲಿಯನ್ನು ಸ್ಥಾಪಿಸಿರುವ ಈ ಜಾಗ ಅತ್ಯಂತ ನಯನ ಮನೋಹರ ಪರಿಸರವನ್ನು ಹೊಂದಿದೆ. ಬೆಟ್ಟದ ಹಿಂಬದಿಯಲ್ಲಿ ಕೆ.ಆರ್.ಎಸ್. ಹಿನ್ನೀರಿನ ಮನೋಹರ ದೃಶ್ಯವು ಕಣ್ಮನ ತಣಿಸುತ್ತದೆ. ಹತ್ತಿರದಲ್ಲಿ ಅರಬ್ಬೀತಿಟ್ಟು ಅರಣ್ಯಧಾಮದ ಪರಿಸರ. ಹೀಗೆ ಪ್ರಕೃತಿಯ ಮಧ್ಯೆ ಬಾಹುಬಲಿ ಶಾಂತ ಚಿತ್ತದಿಂದ ನಿಂತಿದ್ದಾನೆ. ರಾಜ್ಯದ ಮಾಜಿ ಮುಖ್ಯಮಂತ್ರಿ ದೇವರಾಜ ಅರಸರ ಕಾಲದಲ್ಲಿ ಈ ಪ್ರದೇಶವನ್ನು ಪ್ರವಾಸೋದ್ಯಮ ಕ್ಷೇತ್ರವನ್ನಾಗಿ ಮಾರ್ಪಡಿಸಲು ಅರಣ್ಯ ಇಲಾಖೆಗೆ 25 ಎಕರೆ ಭೂಮಿ ನೀಡಲು ನಿರ್ದೇಶಿಸಿದ್ದರು. ಆದರೆ ಇಂದಿಗೂ ಅದು ಕೈಗೊಂಡಿಲ್ಲ. ಈ ಮಧ್ಯೆ ಬೆಟ್ಟದ ಸುತ್ತಮುತ್ತ ಗಣಿಗಾರಿಕೆ ಕಾನೂನು ಬಾಹಿರವಾಗಿ ನಡೆಯುತ್ತಿದ್ದು, ಸರ್ಕಾರಗಳು ಕೂಡಲೇ ಈ ಎಲ್ಲ ತೊಂದರೆಗಳನ್ನು ಬಗೆಹರಿಸಿ ಕ್ಷೇತ್ರವನ್ನು ಪ್ರವಾಸೋದ್ಯಮಕ್ಕೆ ಅನುಕೂಲವಾಗುವಂತೆ ಮಾಡಿದಲ್ಲಿ ಗೊಮ್ಮಟಗಿರಿ ಖ್ಯಾತಿ ದೇಶಾದ್ಯಂತ ಹಬ್ಬುವುದರಲ್ಲಿ ಸಂಶಯವಿಲ್ಲ ಎಂದು ಹೇಳಬಹುದು. ಅಲ್ಲದೆ ಈ ಹುಣಸೂರು ಪರಿಸರದಲ್ಲಿರುವ ಕೆಲವು ಜೈನ ಬಸದಿಗಳನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವುದು ನಮ್ಮ ಮತ್ತು ಸರ್ಕಾರದ ದೊಡ್ಡ ಜವಾಬ್ದಾರಿಯಾಗಿದೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು:**


1. ಶ್ಯಾಮಸುಂದರ್.ಬಿ,, (2011) ಹುಣಸೂರು ತಾಲ್ಲೂಕ ಗ್ಯಾಸೆಟಿಯರ್, ಕರ್ನಾಟಕ ಸರ್ಕಾರದ ಪ್ರಕಟಣೆ, ಬೆಂಗಳೂರು ಪುಟ ಸಂಖ್ಯೆ-140, 141.
2. ಕನ್ನಡ ವಿಶ್ವಕೋಶ, ಸಂ-8, ಪು.ಸಂ:356 ಮತ್ತು 357
3. ರೆಸ್ ಬಿ.ಎಲ್., ಮೈಸೂರು ಅಂಡ್ ಕೂರ್ಗ್ ಫ್ರಮ್ ದ ಇನ್ಸ್ಕ್ರಿಪ್ಷನ್ಸ್, ಪು-23.
4. ಚಿದಾನಂದಮೂರ್ತಿ ಎಂ – ಕ,ಶಾ,ಸಾಂ,ಅ, ಪು-1



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.